# ಜಗತ್ತಿನ ಅಂತ್ಯ ಬಹುತೇಕ ಇಲ್ಲಿದೆ!
# 2011ರ ಮೇ 21ರಂದು
# ಪವಿತ್ರ ದೇವರು ನ್ಯಾಯವಿಚಾರಣೆಯ
# ದಿನವನ್ನು ತರಲಿದ್ದಾರೆ

ನ್ಯಾಯವಿಚಾರಣೆಯ ದಿನಕ್ಕೆ ಜಗತ್ತು ಭಯಪಡುತ್ತದೆ ಹಾಗೂ ಅದು, ಮನುಷ್ಯರ ಪಾಪಗಳ ಕಾರಣ ದೇವರು ಜಗತ್ತನ್ನು ನಾಶಮಾಡುವ ದಿನವಾಗಿದೆ. ನ್ಯಾಯವಿಚಾರಣೆಯ ದಿನ ಬರುತ್ತದೆ ಎಂದು ಜಗತ್ತು ನಂಬುವುದು ಉಚಿತವಾಗಿದೆ. ಆ ದಿನದ ಬಗ್ಗೆ ಬೈಬಲ್ ನಮಗೆ ಸರಿಯಾದ ಹಾಗೂ ನಿಖರವಾದ ಮಾಹಿತಿಯನ್ನು ನೀಡುತ್ತದೆ.

ಈ ಸುಂದರ ಜಗತ್ತಿನ ಸೃಷ್ಟಿಕರ್ತನಾದ ಪವಿತ್ರ ದೇವರು ಬರೆದಿರುವ ಪವಿತ್ರ ಪುಸ್ತಕ ಬೈಬಲ್. ಬೈಬಲ್ ಸುಮಾರು 1,900 ವರ್ಷಗಳ ಹಿಂದೆ ಪೂರ್ಣಗೊಳಿಸಲಾದ ಒಂದು ಬಹಳ ಪುರಾತನ ಪುಸ್ತಕ ಎಂಬುದರಲ್ಲಿ ಯಾವುದೇ ಸಂದೇಹವಿಲ್ಲ. ಅದರ ಮೂಲ ಭಾಷೆಗಳಿಂದ, *ಹೆಚ್ಚಾಗಿ ಇಬ್ರಿಯ ಹಾಗೂ ಗ್ರೀಕ್‌ಗಳಿಂದ*, ಅದನ್ನು ಎಂದೂ ಬದಲಾಯಿಸಲಾಗಿಲ್ಲ, ಹಾಗೂ ಮೂಲ ಭಾಷೆಗಳಲ್ಲಿರುವ ಪ್ರತಿಯೊಂದು ಪದ ದೇವರ ಬಾಯಿಂದ ಬಂದಿದೆ. ಬೈಬಲ್ ಅನ್ನು, *ಹಳೆ ಒಡಂಬಡಿಕೆ ಹಾಗೂ ಹೊಸ ಒಡಂಬಡಿಕೆ ಎಂಬ*, ಎರಡು ಭಾಗಗಳನ್ನಾಗಿ ವಿಭಜಿಸಲಾಗಿದೆ, ಪ್ರತಿಯೊಂದು ಭಾಗವನ್ನು ಅನೇಕ ಪುಸ್ತಕಗಳನ್ನಾಗಿ ವಿಭಜಿಸಲಾಗಿದೆ. ಪ್ರತಿಯೊಂದು ಪುಸ್ತಕವನ್ನು ಅಧ್ಯಾಯಗಳನ್ನಾಗಿ ವಿಭಜಿಸಲಾಗಿದೆ, ಹಾಗೂ ಪ್ರತಿಯೊಂದು ಅಧ್ಯಾಯ ಶ್ಲೋಕಗಳಲ್ಲಿ ವಿಭಜಿತವಾಗಿದೆ. ಆ ಪುಸ್ತಕಗಳಲ್ಲಿ ಒಂದಕ್ಕೆ ತಿಮೊಥೆಯನಿಗೆ ಬರೆದ ಎರಡನೆಯ ಪತ್ರಿಕೆ ಎಂಬ ಹೆಸರಿದೆ. ಈ ಪುಸ್ತಕದ ಅಧ್ಯಾಯ 3, ಶ್ಲೋಕ 16ರಲ್ಲಿ ಪವಿತ್ರ ದೇವರು ನಮಗೆ ಹೇಳುತ್ತಾರೆ:

**ದೈವ ಪ್ರೇರಿತವಾದ ಪ್ರತಿಯೊಂದು ಶಾಸ್ತ್ರವು ಉಪದೇಶಕ್ಕೂ ಖಂಡನೆಗೂ ತಿದ್ದುಪಾಟಿಗೂ ನೀತಿಶಿಕ್ಷೆಗೂ ಉಪಯುಕ್ತವಾಗಿದೆ.**

ಯೆರೆಮೀಯ ಅಧ್ಯಾಯ 36 ಶ್ಲೋಕ 1 ರಿಂದ 4ರಲ್ಲಿ, ಬೈಬಲ್ ಅನ್ನು ಹೇಗೆ ಬರೆಯಲಾಯಿತು ಎಂಬುದರ ಉದಾಹರಣೆಯನ್ನು ದೇವರು ನೀಡುತ್ತಾರೆ:

**ಯೋಷೀಯನ ಮಗನೂ ಯೆಹೂದದ ಅರಸನೂ ಆದ ಯೆಹೋಯಾಕೀಮನ ಆಳಿಕೆಯ ನಾಲ್ಕನೆಯ ವರುಷದಲ್ಲಿ ಯೆಹೋವನು ಯೆರೆಮೀಯನಿಗೆ ಈ ಮಾತನ್ನು ದಯಪಾಲಿಸಿದನು - ನೀನು ಗ್ರಂಥ ಬರೆಯತಕ್ಕ ಸುರಳಿಯನ್ನು ತೆಗೆದುಕೊಂಡು ನಾನು ಯೋಷೀಯನ ಕಾಲದಲ್ಲಿ ನಿನ್ನ ಸಂಗಡ ಮಾತಾಡಿದಂದಿನಿಂದ ಇಂದಿನವರೆಗೆ ಇಸ್ರಾಯೇಲು, ಯೆಹೂದ, ಸಕಲ ಜನಾಂಗಗಳು, ಇವುಗಳ ವಿಷಯವಾಗಿ ನಿನಗೆ ನುಡಿಯುತ್ತಾ ಬಂದಿರುವ ಮಾತುಗಳನ್ನೆಲ್ಲಾ ಬರೆ. ಒಂದು ವೇಳೆ ಯೆಹೂದ ವಂಶದವರು ನಾನು ಅವರಿಗೆ ಮಾಡಬೇಕೆಂದಿರುವ ಕೇಡನ್ನು ಕೇಳಿ ತಮ್ಮ ತಮ್ಮ ದುರ್ಮಾರ್ಗಗಳಿಂದ ಹಿಂದಿರುಗಿಯಾರು; ಹಿಂದಿರುಗಿದರೆ ಅವರ ಪಾಪಾಪರಾಧಗಳನ್ನು ಕ್ಷಮಿಸಿಬಿಡುವೆನು. ಆಗ ಯೆರೆಮೀಯನು ನೇರೀಯನ ಮಗನಾದ ಬಾರೂಕನನ್ನು ಕರೆಯಿಸಿ ಯೆಹೋವನ ಮಾತುಗಳನ್ನೆಲ್ಲಾ ನುಡಿಯಲು ಅವನು ಯೆರೆಮೀಯನ ಬಾಯಿಂದ ಬಂದ ಹಾಗೆಯೇ ಅವುಗಳನ್ನು ಗ್ರಂಥದ ಸುರಳಿಯಲ್ಲಿ ಬರೆದನು.** *ಗ್ರಂಥದ ಸುರಳಿ ಎಂದರೆ ಬೈಬಲ್.*

ಪವಿತ್ರ ದೇವರು ನಮ್ಮ ಮಾನವ ಮನಸ್ಸುಗಳು ವಿವರಿಸಲು ಅಥವಾ ಗ್ರಹಿಸಲು ಪ್ರಾರಂಭಿಸುವುದಕ್ಕಿಂತಲೂ ಎಷ್ಟೋ ಶ್ರೇಷ್ಠರಾಗಿದ್ದಾರೆ. ಆದಿಕಾಂಡ ಅಧ್ಯಾಯ 1 ಶ್ಲೋಕ 1ರಲ್ಲಿ ದೇವರು ಹೀಗೆಂದು ಘೋಷಿಸುತ್ತಾರೆ:

**ಆದಿಯಲ್ಲಿ ದೇವರು ಆಕಾಶವನ್ನೂ ಭೂಮಿಯನ್ನೂ ಉಂಟುಮಾಡಿದನು.**

ಈ ಸುಂದರ ವಿಶ್ವವನ್ನು, ಅದರ ಎಲ್ಲ ಗಿಡಗಳು ಹಾಗೂ ಪ್ರಾಣಿಗಳು, ಪಕ್ಷಿಗಳು ಹಾಗೂ ಸಮುದ್ರದ ಜೀವಿಗಳು, ಹಾಗೂ ಈ ಭೂಮಿಯನ್ನು ಆಳಲು ಸೃಷ್ಟಿಸಲ್ಪಟ್ಟ ಮನುಕುಲ ಸೇರಿದಂತೆ, ಎಲ್ಲವನ್ನು ಪವಿತ್ರ ದೇವರು ಸೃಷ್ಟಿಸಿದರು ಎಂದು ನಾವು ತಿಳಿದುಕೊಳ್ಳಲು ಸಾಧ್ಯವಾಗುವಂತೆ ನಮಗಾಗಿ ಪವಿತ್ರ ಬೈಬಲ್ ಎಂಬ ಪುಸ್ತಕವನ್ನು ಬರೆಯಲಾಗಿದೆ. ಕೇವಲ ಮಾತನಾಡಿ ಎಲ್ಲ ರೀತಿಯ ಗಿಡ, ಪ್ರಾಣಿ, ಸಮುದ್ರ ಜೀವಿ ಹಾಗೂ ಮನುಕುಲ, ಸೂರ್ಯ, ನಕ್ಷತ್ರಗಳು, ಇತ್ಯಾದಿಗಳನ್ನು ಅಸ್ತಿತ್ವಕ್ಕೆ ತಂದ ಪವಿತ್ರ ದೇವರೊಂದಿಗೆ ಹೋಲಿಕೆಯಾಗುವ ಯಾವುದೇ ಜೀವಿ ನಿಜವಾಗಿಯೂ ಇಲ್ಲ. ಉದಾಹರಣೆಗೆ, ಪವಿತ್ರ ದೇವರು ತನ್ನ ಪವಿತ್ರ ಬೈಬಲ್ ನಲ್ಲಿ ಆದಿಕಾಂಡ ಅಧ್ಯಾಯ 1 ಶ್ಲೋಕ 24 ರಿಂದ 26ರಲ್ಲಿ ನಮಗೆ ಹೀಗೆಂದು ಹೇಳುತ್ತಾರೆ:

**ಮತ್ತು ದೇವರು - ಭೂಮಿಯಿಂದ ಜೀವಜಂತುಗಳು ಉಂಟಾಗಲಿ; ಪಶುಕ್ರಿಮಿಗಳೂ ಕಾಡುಮೃಗಗಳೂ ತಮ್ಮ ತಮ್ಮ ಜಾತಿಗನುಸಾರವಾಗಿ ಹುಟ್ಟಲಿ ಅಂದನು; ಹಾಗೆಯೇ ಆಯಿತು. ದೇವರು ಕಾಡುಮೃಗಗಳನ್ನೂ ಪಶುಗಳನ್ನೂ ನೆಲದ ಮೇಲೆ ಹರಿದಾಡುವ ಕ್ರಿಮಿಕೀಟಗಳನ್ನೂ ಅವುಗಳ ಜಾತಿಗನುಸಾರ ಉಂಟುಮಾಡಿದನು. ಆತನು ಅದನ್ನು ಒಳ್ಳೇದೆಂದು ನೋಡಿದನು. ಆ ಮೇಲೆ ದೇವರು - ನಮ್ಮ ಸ್ವರೂಪದಲ್ಲಿ ನಮ್ಮ ಹೋಲಿಕೆಗೆ ಸರಿಯಾಗಿ ಮನುಷ್ಯರನ್ನು ಉಂಟುಮಾಡೋಣ; ಅವರು ಸಮುದ್ರದಲ್ಲಿರುವ ಮೀನುಗಳ ಮೇಲೆಯೂ ಅಂತರಿಕ್ಷದಲ್ಲಿ ಹಾರಾಡುವ ಹಕ್ಕಿಗಳ ಮೇಲೆಯೂ ಪಶುಗಳ ಮೇಲೆಯೂ ನೆಲದ ಮೇಲೆ ಹರಿದಾಡುವ ಎಲ್ಲಾ ಕ್ರಿಮಿಕೀಟಗಳ ಮೇಲೆಯೂ ಎಲ್ಲಾ ಭೂಮಿಯ ಮೇಲೆಯೂ ದೊರೆತನ ಮಾಡಲಿ ಅಂದನು.**

ನಾವು ಮನುಕುಲ ಎಂದು ಕರೆಯುವ ಭೂಮಿಯ ಜನರನ್ನು, ಈ ಭೂಮಿಯ ಮೇಲೆ ಆಳುವ ಉದ್ದೇಶದಿಂದ ಸೃಷ್ಟಿಸಲಾಯಿತು. ಸಾಧ್ಯವಾದಷ್ಟು ಸಂತೋಷದಿಂದ ಹಾಗೂ ಬುದ್ಧಿವಂತರಾಗಿ ಬಾಳುವದಕ್ಕೋಸ್ಕರ ದೇವರು ನಮಗೆ ನಿಯಮಗಳನ್ನು ನೀಡಿದರು. ಆದರೆ, ಆ ನಿಯಮಗಳನ್ನು ಉಲ್ಲಂಘಿಸುವುದು ಪಾಪ, ಹಾಗೂ ಪಾಪ ದೇವರಿಂದ ಶಿಕ್ಷೆಯನ್ನು ತರುತ್ತದೆ ಎಂದು ದೇವರು ಎಚ್ಚರಿಕೆ ನೀಡುತ್ತಾರೆ. **ಯಾಕಂದರೆ ಪಾಪವು ಕೊಡುವ ಸಂಬಳ ಮರಣ**... ಎಂದು ರೋಮಾಪುರದವರಿಗೆ ಅಧ್ಯಾಯ 6 ಶ್ಲೋಕ 23ರಲ್ಲಿ ಬೈಬಲ್ ಘೋಷಿಸುತ್ತದೆ.

ಇರುವುದು ಒಬ್ಬರೇ ದೇವರು ಎಂದು ಬೈಬಲ್ ಬೋಧಿಸುತ್ತದೆ. ಧರ್ಮೋಪದೇಶಕಾಂಡ ಅಧ್ಯಾಯ 4 ಶ್ಲೋಕ 39ರಲ್ಲಿ ಬೈಬಲ್ ಹೀಗೆಂದು ಹೇಳುತ್ತದೆ:

**ನೀವು ಇದನ್ನೆಲ್ಲಾ ಆಲೋಚಿಸಿ ಆಕಾಶದಲ್ಲಿಯೂ ಭೂಮಿಯಲ್ಲಿಯೂ ಯೆಹೋವನೊಬ್ಬನೇ ದೇವರು ಬೇರೆ ಯಾವ ದೇವರೂ ಇಲ್ಲವೆಂಬದನ್ನು ಈಗ ಗ್ರಹಿಸಿಕೊಂಡು ಜ್ಞಾಪಕದಲ್ಲಿಡಬೇಕು.**

ದೇವರು ಇಷ್ಟು ಶ್ರೇಷ್ಠ ಹಾಗೂ ಮಹಿಮೆಯುಳ್ಳವನಾಗಿರುವುದರಿಂದ, ಆತ ತನ್ನನ್ನು ತಾನು ಅನೇಕ ವಿವಿಧ ಹೆಸರುಗಳಿಂದ ಕರೆಯುತ್ತಾರೆ. ಪ್ರತಿಯೊಂದು ಹೆಸರು ದೇವರ ಭವ್ಯ ಗುಣ ಹಾಗೂ ಲಕ್ಷಣದ ಬಗ್ಗೆ ನಮಗೆ ಏನನ್ನಾದರು ಹೇಳುತ್ತದೆ. ಹೀಗೆ, ನಾವು ಬೈಬಲ್ ನಲ್ಲಿ ದೇವರು, ಯೆಹೋವ, ಕ್ರಿಸ್ತ, ಯೇಸು, ಕರ್ತ, ಅಲ್ಲಾ, ಪವಿತ್ರಾತ್ಮ, ರಕ್ಷಕ, ಇತ್ಯಾದಿ ಹೆಸರುಗಳನ್ನು ಕಾಣುತ್ತೇವೆ. ನಮ್ಮ ಎಲ್ಲ ಪಾಪಗಳಿಂದ ಕ್ಷಮೆ ಹಾಗೂ ನಿರಂತರ ಬದುಕನ್ನು ದೇವರ ದಯಾಮಯ ಹಾಗೂ ಮಹಿಮೆಯುಳ್ಳ ಕೆಲಸಗಳಿಂದ ನಾವು ಪಡೆಯಬಹುದಾದ ಒಂದೇ ಸಾಧನ ದೇವರು ಎಂದು ಯೆಹೋವ, ಯೇಸು, ರಕ್ಷಕ, ಹಾಗೂ ಕ್ರಿಸ್ತ ಎಂಬ ಹೆಸರುಗಳು ನಿರ್ದಿಷ್ಟವಾಗಿ ಸೂಚಿಸುತ್ತವೆ. ಈ ವಿಷಯದ ಬಗ್ಗೆ ಹೆಚ್ಚಿನ ಮಾಹಿತಿಗಾಗಿ, of *I Hope God Will Save Me*. ಎಂಬ ಪುಸ್ತಕದ ಉಚಿತ ಪ್ರತಿಯನ್ನು ಕೇಳಿಪಡೆಯಬಹುದು.

ಬೈಬಲ್ ನ ಬಗ್ಗೆ, ಅಥವಾ ಬೈಬಲ್ ಗೆ ಸೇರ್ಪಡೆಗಳೆಂದು ಪರಿಗಣಿಸಲ್ಪಡುವ ಕೊರಾನ್ ಅಥವಾ ಮಾರ್ಮಾನ್ ನ ಗ್ರಂಥದಂತಹ ಅನೇಕ ಪುಸ್ತಕಗಳನ್ನು ಬರೆಯಲಾಗಿದೆ. ಆದರೆ, ಅವು ಪವಿತ್ರ ಗ್ರಂಥವೆಂದು ಎಷ್ಟೇ ಪುರಾತನವಾಗಿರಲಿ ಅಥವಾ ಪ್ರತಿಷ್ಠಿತವಾಗಿರಲಿ ಅಥವಾ ಎಷ್ಟೇ ಚೆನ್ನಾಗಿ ಅಂಗೀಕರಿಸಲ್ಪಟ್ಟಿರಲಿ, ಬೈಬಲ್ ಅಲ್ಲದೆ ಬೇರೆ ಯಾವುದೇ ಪುಸ್ತಕ ಸ್ವಯಂ ದೇವರಿಂದ ಲಿಖಿತವಾಗಿಲ್ಲ, ಹಾಗೂ ಬೈಬಲ್ ನಷ್ಟು ಪವಿತ್ರವಾಗಿಲ್ಲ. ಪ್ರಕಟನೆ ಅಧ್ಯಾಯ 22 ಶ್ಲೋಕ 18ರಲ್ಲಿ ದೇವರು ಹೀಗೆಂದು ಎಚ್ಚರಿಕೆ ನೀಡುತ್ತಾರೆ:

**ಈ ಪುಸ್ತಕದ ಪ್ರವಾದನಾವಾಕ್ಯಗಳನ್ನು ಕೇಳುವ ಪ್ರತಿಯೊಬ್ಬನಿಗೆ ನಾನು ಹೇಳುವ ಸಾಕ್ಷಿ ಏನಂದರೆ - ಇವುಗಳಿಗೆ ಯಾವನಾದರೂ ಹೆಚ್ಚು ಮಾತುಗಳನ್ನು ತಂದುಹಾಕಿದರೆ ದೇವರು ಅವನ ಮೇಲೆ ಈ ಪುಸ್ತಕದಲ್ಲಿ ಬರೆದಿರುವ ಉಪದ್ರವಗಳನ್ನು ತಂದುಹಾಕುವನು.**

ಈ ಶ್ಲೋಕದಲ್ಲಿ "ಉಪದ್ರವಗಳು" ಎಂಬ ಪದ, ಪಾಪ ಮಾಡುವ ಎಲ್ಲರೂ ಎದುರಿಸಬೇಕಾದ ಸಾವು ಹಾಗೂ ನಾಶದ ಶಿಕ್ಷೆಯನ್ನು ಉಲ್ಲೇಖಿಸುತ್ತದೆ. ದೇವರು, ತನ್ನ ಅನಂತ ಜ್ಞಾನದಿಂದ ಸೃಷ್ಟಿಸಿದ ಈ ಜಗತ್ತನ್ನು ಪ್ರೀತಿಸುತ್ತಾರೆಯಾದರೂ ಪಾಪ ಮಾಡಿದವರಿಗೆ ಮರಣದ ಶಿಕ್ಷೆಯಾಗಬೇಕು ಎಂದು ದೇವರ ನಿಯಮ ವಿಧಿಸುತ್ತದೆ. ಯೆಹೆಜ್ಕೇಲನು ಅಧ್ಯಾಯ 18 ಶ್ಲೋಕ 20ರಲ್ಲಿ ಬೈಬಲ್ ಹೀಗೆಂದು ಘೋಷಿಸುತ್ತದೆ: **ಪಾಪ ಮಾಡುವವನೇ ಸಾಯುವನು.** ರೋಮಾಪುರದವರಿಗೆ ಅಧ್ಯಾಯ 3 ಶ್ಲೋಕ 10ರಲ್ಲಿ ಬೈಬಲ್ ಹೀಗೆಂದು ಘೋಷಿಸುತ್ತದೆ: **ನೀತಿವಂತನು ಇಲ್ಲ, *ಅಂದರೆ ಪಾಪ ಮಾಡದವನು,* ಒಬ್ಬನಾದರೂ ಇಲ್ಲ.**

ದೇವರು ಕೂಡ ತನ್ನ ನಿಯಮಕ್ಕೆ ವಿಧೇಯರಾಗಿರಬೇಕು, ಆದ್ದರಿಂದ, ಜಗತ್ತಿನ ಎಲ್ಲಾ ಜನರು ಪಾಪಿಷ್ಠರಾದ್ದರಿಂದ, ಆತ ಕೊನೆಯಲ್ಲಿ ಜಗತ್ತನ್ನು ನಾಶ ಮಾಡಬೇಕು. ಜಗತ್ತಿನಲ್ಲಿ ಪಾಪ ಬಹಳ ಹೆಚ್ಚಾಗಿದೆ ಎಂಬುದು ಸ್ಪಷ್ಟವಾಗಿದೆ. ಯೆರೆಮೀಯ ಅಧ್ಯಾಯ 25 ಶ್ಲೋಕ 33ರಲ್ಲಿ ಬೈಬಲ್ ಹೀಗೆಂದು ಎಚ್ಚರಿಸುತ್ತದೆ:

**ಆ ದಿನದಲ್ಲಿ ಯೆಹೋವನಿಂದ ಹತರಾದವರು ಲೋಕದ ಒಂದು ಕಡೆಯಿಂದ ಇನ್ನೊಂದು ಕಡೆಯವರೆಗೂ ಬಿದ್ದಿರುವರು; ಅವರಿಗಾಗಿ ಯಾರೂ ಗೋಳಾಡರು, ಅವರನ್ನು ಯಾರೂ ಒಟ್ಟುಗೂಡಿಸರು, ಯಾರೂ ಹೂಣಿಡರು, ಭೂಮಿಯ ಮೇಲೆ ಗೊಬ್ಬರವಾಗುವರು.**

ಆದರೆ, ಪವಿತ್ರ ದೇವರು ಮಹಾ ಕರುಣಾಮಯಿ, ಕನಿಕರ ಹಾಗೂ ಪ್ರೀತಿವುಳ್ಳ ದೇವರು ಎಂದು ಬೈಬಲ್ ನಮಗೆ ಹೇಳುತ್ತದೆ. ಆದುದರಿಂದಲೆ ಆತ ನಾಶನಕ್ಕೆ ಮುಂಚಿತವಾಗಿ ನ್ಯಾಯವಿಚಾರಣೆಯ ದಿನದ ನಿಖರವಾದ ಸಮಯವನ್ನು ನಮಗೆ ಕೊಟ್ಟಿದ್ದಾರೆ. ಆಮೋಸನು ಅಧ್ಯಾಯ 3 ಶ್ಲೋಕ 7ರಲ್ಲಿ ಬೈಬಲ್ ನಮಗೆ ಹೀಗೆಂದು ಹೇಳುತ್ತದೆ:

**ಕರ್ತನಾದ ಯೆಹೋವನು ತನ್ನ ಸೇವಕರಾದ ಪ್ರವಾದಿಗಳಿಗೆ ತನ್ನ ರಹಸ್ಯವನ್ನು ತಿಳಿಸದೆ ಏನೂ ಮಾಡನು.**

ಪರಿಣಾಮವಾಗಿ, ಸಂಪೂರ್ಣ ಜಗತ್ತಿನ ಮೇಲೆ ಬರಲಿರುವ ದೇವರ ನಾಶನದ ಯೋಜನೆಯ ನಿಖರವಾದ ಸಮಯ ಹಾಗೂ ಅನೇಕ ವಿವರಗಳನ್ನು ನಾವು ಈಗ ಬೈಬಲ್ ನಿಂದ ತಿಳಿದುಕೊಳ್ಳಬಹುದು.

ಇನ್ನೂ ಸಮಯವಿರುವಾಗಲೆ ದೇವರ ಕೃಪಾಪೂರ್ಣ ದಯೆಗಾಗಿ ನಾವು ಬಹಳ ದೀನರಾಗಿ ಮೊರೆಯಿಡಬಹುದು. ಪ್ರಾಯಶಃ, ದೇವರು ಇಷ್ಟು ಕರುಣಾಮಯಿಯಾಗಿರುವುದರಿಂದ, ಕರುಣೆಗಾಗಿ ದೈನ್ಯದಿಂದ ದೇವರನ್ನು ಬೇಡಿಕೊಳ್ಳುತ್ತಿರುವವರನ್ನು ಆತ ಕ್ಷಮಿಸಬಹುದು. ಉದಾಹರಣೆಗೆ ಚೆಫನ್ಯ ಅಧ್ಯಾಯ 2 ಶ್ಲೋಕ 3ರಲ್ಲಿ ದೇವರು ಹೀಗೆಂದು ಆಶ್ವಾಸನೆ ನೀಡುತ್ತಾರೆ:

**ಯೆಹೋವನ ನಿಯಮವನ್ನು ಕೈಕೊಂಡ ಲೋಕದ ದೀನರೇ, ನೀವೆಲ್ಲರೂ ಯೆಹೋವನನ್ನು ಆಶ್ರಯಿಸಿರಿ, ಸದ್ಧರ್ಮವನ್ನು ಅಭ್ಯಾಸಿಸಿರಿ, ಸೈನ್ಯವನ್ನು ಹೊಂದಿಕೊಳ್ಳಿರಿ; ಯೆಹೋವನ ಸಿಟ್ಟಿನ ದಿನದಲ್ಲಿ ಒಂದು ವೇಳೆ ಮರೆಯಾಗುವಿರಿ.**

ಪಾಪದ ಕಾರಣ ಈ ಸಂಪೂರ್ಣ ಜಗತ್ತಿನ ಮೇಲೆ ನಾಶನವನ್ನು ತರಲು ತನಗೆ ಸಂಪೂರ್ಣವಾಗಿ ಸಾಧ್ಯವೆಂದು ಪವಿತ್ರ ದೇವರು ನಮಗೆ ಪ್ರದರ್ಶಿಸುತ್ತಾರೆ. ಆದಿಕಾಂಡ ಅಧ್ಯಾಯ 6 ಶ್ಲೋಕ 12 ಹಾಗೂ 13ರಲ್ಲಿ ಈ ಘೋರ ಸತ್ಯದ ಬಗ್ಗೆ ಪವಿತ್ರ ಬೈಬಲ್ ನಮಗೆ ಮಾಹಿತಿ ನೀಡುತ್ತದೆ:

**ದೇವರು ಲೋಕವನ್ನು ನೋಡಿದಾಗ ಅದು ಕೆಟ್ಟುಹೋಗಿತ್ತು; ಭೂನಿವಾಸಿಗಳೆಲ್ಲರೂ ತಮ್ಮ ನಡವಳಿಕೆಯನ್ನು ಕೆಡಿಸಿಕೊಂಡಿದ್ದರು. ಆಗ ದೇವರು ನೋಹನಿಗೆ - ಎಲ್ಲಾ ದೇಹಿಗಳಿಗೂ ಅಂತ್ಯವನ್ನು ತೀರ್ಮಾನಿಸಿದ್ದೇನೆ; ಭೂಲೋಕವು ಅವರ ಅನ್ಯಾಯದಿಂದ ತುಂಬಿ ಅದೆ; ನಾನು ಅವರನ್ನೂ ಭೂಮಿಯ ಮೇಲಿರುವದೆಲ್ಲವನ್ನೂ ಅಳಿಸಿಬಿಡುತ್ತೇನೆ.**

ಕ್ರಿಸ್ತಪೂರ್ವ 4990ನೇ ಇಸವಿಯಲ್ಲಿ ದೇವರು ಜಲಪ್ರಳಯವನ್ನು ತಂದು ಎಂಟು ಜನರು ಹಾಗೂ ಅವರೊಂದಿಗಿದ್ದ ಪ್ರಾಣಿಗಳನ್ನು ಹೊರತುಪಡಿಸಿ ಸಂಪೂರ್ಣ ಭೂಮಿಯನ್ನು ನಾಶಗೊಳಿಸಿದರು ಎಂದು ಬೈಬಲ್ ನ ಜಾಗರೂಕವಾದ ಅಧ್ಯಯನದಿಂದ ನಾವು ಕಲಿಯುತ್ತೇವೆ. ಅವರನ್ನು ದೇವರು ಸುರಕ್ಷಿತವಾಗಿರಲು ನಾವೆಯೊಳಗೆ ಕರೆದುಕೊಂಡು ಬಂದದ್ದರಿಂದ ಅವರು ನಾಶವಾಗಲಿಲ್ಲ. ಅವರ ನಾಯಕನಾದ ನೋಹನು, ಸುಮಾರು 450 ಅಡಿ, *ಅಂದರೆ 137 ಮೀಟರ್,* ಉದ್ದನೆಯ ಒಂದು ದೊಡ್ಡ ನಾವೆಯನ್ನು ಕಟ್ಟಬೇಕೆಂಬ ದೇವರ ಆದೇಶವನ್ನು ಪಾಲಿಸಿದ್ದನು.

ಇಬ್ರಿಯರಿಗೆ ಅಧ್ಯಾಯ 11 ಶ್ಲೋಕ 7ರಲ್ಲಿ ಪವಿತ್ರ ಬೈಬಲ್ ನಮಗೆ ಹೀಗೆಂದು ಹೇಳುತ್ತದೆ:

**ನಂಬಿಕೆಯಿಂದಲೇ ನೋಹನು ಅದುವರೆಗೆ ಕಾಣದಿದ್ದ ಸಂಗತಿಗಳ ವಿಷಯವಾಗಿ ದೈವೋಕ್ತಿಯನ್ನು ಹೊಂದಿ ಭಯಭಕ್ತಿಯುಳ್ಳವನಾಗಿ ತನ್ನ ಮನೆಯವರ ಸಂರಕ್ಷಣೆಗೋಸ್ಕರ ನಾವೆಯನ್ನು ಕಟ್ಟಿ ಸಿದ್ಧಮಾಡಿದನು. ಅದರಿಂದ ಅವನು ಲೋಕದವರನ್ನು ದಂಡನೆಗೆ ಪಾತ್ರರೆಂದು ನಿರ್ಣಯಿಸಿಕೊಂಡು ನಂಬಿಕೆಯ ಫಲವಾದ ನೀತಿಗೆ ಬಾಧ್ಯನಾದನು.**

ಸಂಪೂರ್ಣ ಜಗತ್ತನ್ನು ಪೂರ್ತಿಯಾಗಿ ಹೊದಿಸಿದ ಪ್ರಳಯದ ಆರಂಭಕ್ಕೆ ಏಳು ದಿನಗಳ ಮುಂಚೆ, ನಾವೆಯ ಸುರಕ್ಷತೆಯೊಳಗೆ ಹೋಗಲು ಅವರ ಬಳಿ ಏಳು ದಿನಗಳಿವೆ ಎಂದು ಜಗತ್ತಿನ ಜನರಿಗೆ ಎಚ್ಚರಿಕೆ ನೀಡಬೇಕೆಂದು ದೇವರು ನೋಹನಿಗೆ ಆಜ್ಞಾಪಿಸಿದರು. ಆ ವರ್ಷದ 2ನೇ ತಿಂಗಳಿನ 17ನೆಯ ದಿನದಂದು ದೇವರು ನಾವೆಯ ಬಾಗಿಲನ್ನು ಮುಚ್ಚಿದರು ಎಂದು ಪವಿತ್ರ ಬೈಬಲ್ ನಮಗೆ ಹೇಳುತ್ತದೆ. ನಂತರ, ಪ್ರಳಯ ಸಂಪೂರ್ಣ ಭೂಮಿಯನ್ನು ಮುಚ್ಚಲು ಪ್ರಾರಂಭಿಸಿತು.

ಸುಮಾರು 5,000 ವರ್ಷಗಳ ನಂತರ, ತನ್ನ ಪವಿತ್ರ ಬೈಬಲ್ ನಲ್ಲಿ, ಪೇತ್ರನು ಬರೆದ ಎರಡನೆಯ ಪತ್ರಿಕೆ ಅಧ್ಯಾಯ 3ರಲ್ಲಿ ದೇವರು, ನೋಹನ ದಿನದಲ್ಲಿ ಜಲಪ್ರಳಯದಿಂದ ಈ ಜಗದ್ವ್ಯಾಪಿ ನಾಶನದ ಬಗ್ಗೆ ಬರೆದರು. ಅದೇ ಅಧ್ಯಾಯದಲ್ಲಿ, ಪವಿತ್ರ ದೇವರು ಬೆಂಕಿಯಿಂದ ಸಂಪೂರ್ಣ ಜಗತ್ತನ್ನು ನಾಶಗೊಳಿಸುವ ಸಮಯ ಬರುವುದು ಎಂದು ಕೂಡ ಆತ ಎಚ್ಚರಿಕೆ ನೀಡಿದರು. ನಮ್ಮ ಸಂಪೂರ್ಣ ವಿಶ್ವ ಶಾಶ್ವತವಾಗಿ ನಾಶವಾಗುವುದು. ಪಾಪದ ಕಾರಣ ಬರುವ ಜಗದ್ವ್ಯಾಪಿ ನಾಶನದ ಈ ಎರಡು ಘೋಷಣೆಗಳ ನಡುವೆ, ದೇವರು ಒಂದು ಬಹಳ ಮುಖ್ಯವಾದ ಹೇಳಿಕೆಯನ್ನು ನೀಡಿದರು. ಪೇತ್ರನು ಬರೆದ ಎರಡನೆಯ ಪತ್ರಿಕೆ ಅಧ್ಯಾಯ 3 ಶ್ಲೋಕ 8ರಲ್ಲಿ ದೇವರು ಹೀಗೆಂದು ಘೋಷಿಸಿದರು:

ಪ್ರಿಯರೇ, ಕರ್ತನ ಎಣಿಕೆಯಲ್ಲಿ ಒಂದು ದಿನವು ಸಾವಿರ ವರುಷಗಳಂತೆಯೂ ಸಾವಿರ ವರುಷಗಳು ಒಂದು ದಿನದಂತೆಯೂ ಅವೆ ಎಂಬದನ್ನು ಮಾತ್ರ ಮರೆಯಬೇಡಿರಿ.

ಪವಿತ್ರ ಬೈಬಲ್ ನ ಆದಿಕಾಂಡ ಅಧ್ಯಾಯ 7 ಶ್ಲೋಕ 4ರಲ್ಲಿ ದೇವರು ಹೀಗೆಂದು ಬರೆದಿದ್ದರು:

**ಏಳು ದಿನಗಳ ನಂತರ ನಾನು ಭೂಮಿಯ ಮೇಲೆ ನಾಲ್ವತ್ತು ದಿವಸ ಹಗಲಿರುಳು ಮಳೆಯನ್ನು ಸುರಿಸಿ ನನ್ನಿಂದಾದ ಜೀವರಾಶಿಗಳನ್ನೆಲ್ಲಾ ಭೂಮಿಯ ಮೇಲಿನಿಂದ ಅಳಿಸಿಬಿಡುತ್ತೇನೆ ಎಂದು ಹೇಳಿದನು.**

ಆದಿಕಾಂಡ ಅಧ್ಯಾಯ 7 ಶ್ಲೋಕ 10 ಹಾಗೂ 11ರಲ್ಲಿ ದೇವರು ಇದನ್ನು ಸೇರಿಸಿದರು:

**ಆ ಏಳು ದಿವಸಗಳಾದ ನಂತರ ಜಲಪ್ರಳಯವು ಭೂಮಿಯ ಮೇಲೆ ಬಂತು. ನೋಹನ ಜೀವಮಾನದ ಆರುನೂರನೆಯ ವರುಷದ ಎರಡನೆಯ ತಿಂಗಳಿನ ಹದಿನೇಳನೆಯ ದಿನದಲ್ಲಿ ಭೂಮಿಯ ಕೆಳಗಿರುವ ಸಾಗರದ ಸೆಲೆಗಳು ಒಡೆದವು;**

ನೋಹನು ಕಟ್ಟಿದ್ದ ನಾವೆ ಮಾತ್ರ ಪ್ರಳಯದ ವಿನಾಶದಿಂದ ಸುರಕ್ಷಿತವಾದ ಸ್ಥಳವಾಗಿತ್ತು. ಅಂತೆಯೆ, ನ್ಯಾಯವಿಚಾರಣೆಯ ದಿನದಂದು ಬರಲಿರುವ ವಿನಾಶದಿಂದ ದೇವರ ಕೃಪಾಪೂರ್ಣ ದಯೆ ಮಾತ್ರ ಸುರಕ್ಷಿತವಾದ ಸ್ಥಳವಾಗಿದೆ.

ಮೇಲೆ ಉಲ್ಲೇಖಿಸಲಾಗಿರುವ ಪೇತ್ರನು ಬರೆದ ಎರಡನೆಯ ಪತ್ರಿಕೆ ಅಧ್ಯಾಯ 3 ಶ್ಲೋಕ 8ರಲ್ಲಿ, ಒಂದು ದಿನ ಸಾವಿರ ವರ್ಷಗಳಿಗೆ ಸಮಾನವಾಗಿದೆ ಎಂದು ಪವಿತ್ರ ದೇವರು ನಮಗೆ ಜ್ಞಾಪಿಸುತ್ತಾರೆ. ಆದ್ದರಿಂದ, ಆದಿಕಾಂಡ ಅಧ್ಯಾಯ 7 ಶ್ಲೋಕ 4ರಲ್ಲಿ ಉಲ್ಲೇಖಿಸಲಾಗಿರುವ ಏಳು ದಿನಗಳನ್ನು ಸರಿಯಾಗಿ ಅರ್ಥಮಾಡಿಕೊಂಡರೆ ಅದು 7,000 ವರ್ಷಗಳಿಗೆ ಸಮಾನವಾಗಿದೆ ಎಂದಾದರೆ, ಜಗದ್ವ್ಯಾಪಿ ವಿನಾಶದಿಂದ ಪಾರಾಗಲು ಏಳು ದಿನಗಳಿವೆ ಎಂದು ದೇವರು ನೋಹನಿಗೆ ಹೇಳಿದಾಗ, ಆತ ನ್ಯಾಯವಿಚಾರಣೆಯ ದಿನದಂದು ಜಗತ್ತನ್ನು ನಾಶಗೊಳಿಸಿದಾಗ ಬರುವ ದೇವರ ಕಡುಕೋಪದಿಂದ ಪಾರಾಗಲು ನಿಖರವಾಗಿ 7,000 ವರ್ಷಗಳಿರುವವು, *ಏಕೆಂದರೆ ಒಂದು ದಿನ 1,000 ವರ್ಷಗಳಿಗೆ ಸಮಾನವಾಗಿದೆ,* ಎಂದು ಕೂಡ ಆತ ಜಗತ್ತಿಗೆ ಹೇಳುತ್ತಿದ್ದರು. ಪವಿತ್ರರಾದ ಅನಂತ ದೇವರು ಎಲ್ಲವನ್ನು ಬಲ್ಲವನಾದ್ದರಿಂದ, ಆದಿ ಯಾವುದು, ಅಂತ್ಯ ಯಾವುದು ಎಂದು ಆತನಿಗೆ ತಿಳಿದಿದೆ. ಜಗತ್ತು ಎಷ್ಟು ಪಾಪಮಯವಾಗುವುದೆಂದು ಆತನಿಗೆ ತಿಳಿದಿತ್ತು.

*ಪ್ರಳಯದ ವರ್ಷವಾದ* ಕ್ರಿಸ್ತಪೂರ್ವ 4990 ರಿಂದ ಏಳು ಸಾವಿರ ವರ್ಷಗಳ ನಂತರ ಎಂದರೆ, *ನಮ್ಮ ಪಂಚಾಂಗದಲ್ಲಿ*, ಕ್ರಿಸ್ತಶಕ 2011.

4990 + 2011 – 1 = 7,000

*ಹಳೆ ಒಡಂಬಡಿಕೆಯ ಕ್ರಿಸ್ತಪೂರ್ವ ಪಂಚಾಂಗದ ತಾರೀಖಿನಿಂದ ಹೊಸ ಒಡಂಬಡಿಕೆಯ ಕ್ರಿಸ್ತಶಕ ಪಂಚಾಂಗದ ತಾರೀಖಿಗೆ ಹೋಗುವಾಗ, ಒಂದು ವರ್ಷವನ್ನು ಕಳೆಯಬೇಕು ಏಕೆಂದರೆ ಪಂಚಾಂಗದಲ್ಲಿ ಶೂನ್ಯ ವರ್ಷ ಇಲ್ಲ.*

ಆತ ನೋಹನ ದಿನದಲ್ಲಿ ಜಲಪ್ರಳಯದಿಂದ ಜಗತ್ತನ್ನು ನಾಶಮಾಡಿದ ನಿಖರವಾಗಿ 7,000 ವರ್ಷಗಳ ನಂತರ ಸಂಪೂರ್ಣ ಜಗತ್ತನ್ನು ಶಾಶ್ವತವಾಗಿ ನಾಶಮಾಡಲು ಆತ ಯೋಜಿಸಿದ್ದಾರೆ ಎಂದು ನಾವು ತಿಳಿದುಕೊಳ್ಳಬೇಕೆಂದು ತಾನು ಬಯಸುವುದಾಗಿ ಪೇತ್ರನು ಬರೆದ ಎರಡನೆಯ ಪತ್ರಿಕೆ ಅಧ್ಯಾಯ 3 ಶ್ಲೋಕ 8ರ ಪದಗಳಿಂದ ಪವಿತ್ರ ದೇವರು ನಮಗೆ ತೋರಿಸುತ್ತಿದ್ದಾರೆ. *ಕ್ರಿಸ್ತಶಕ 2011ನೇ ಇಸವಿ ಜಲಪ್ರಳಯ ಆರಂಭವಾದ ಕ್ರಿಸ್ತಪೂರ್ವ 4990 ರಿಂದ ನಿಖರವಾಗಿ 7,000 ವರ್ಷಗಳ ನಂತರವಾಗಿರುವುದರಿಂದ ನ್ಯಾಯವಿಚಾರಣೆಯ ಕಾಲದ ಕೊನೆಯ ದಿನದಂದು ಬರುವ ನ್ಯಾಯವಿಚಾರಣೆಯ ದಿನದಲ್ಲಿ 2011ನೇ ಇಸವಿ ಜಗತ್ತಿನ ಅಂತ್ಯ ಎಂಬುದಕ್ಕೆ ಬೈಬಲ್ ನಮಗೆ ನಿಸ್ಸಂದಿಗ್ಧವಾದ ಪ್ರಮಾಣ ನೀಡಿದೆ.*

ಅದ್ಭುತವೆಂದರೆ, 2011ರ ಮೇ 21 ನಮ್ಮ ದಿನದ ಬೈಬಲ್ ಪಂಚಾಂಗದ 2ನೆಯ ತಿಂಗಳಿನ 17ನೆಯ ದಿನವಾಗಿದೆ. ಕ್ರಿಸ್ತಪೂರ್ವ 4990ನೇ ಇಸವಿಯಲ್ಲಿ 2ನೆಯ ತಿಂಗಳಿನ 17ನೆಯ ದಿನದಂದೆ ಜಲಪ್ರಳಯ ಆರಂಭವಾಯಿತು ಎಂಬುದನ್ನು ನೆನಪಿಡಿ.

ನ್ಯಾಯವಿಚಾರಣೆಯ ದಿನದ ಕಾಲವಾಗಿ 2011ರ ಮೇ 21ಬಹಳ ನಿಖರವಾಗಿದೆ ಎಂಬುದಕ್ಕೆ ಪವಿತ್ರ ಬೈಬಲ್ ಇನ್ನೂ ಅನೇಕ ಆಶ್ಚರ್ಯಗೊಳಿಸುವ ಪುರಾವೆಗಳನ್ನು ನೀಡುತ್ತದೆ. ಈ ವಿಷಯದ ಬಗ್ಗೆ ಹೆಚ್ಚಿನ ಮಾಹಿತಿಗಾಗಿ, ಫ್ಯಾಮಿಲಿ ರೇಡಿಯೊದಿಂದ ಉಚಿತವಾಗಿ ಲಭ್ಯವಿರುವ *We Are Almost There* ಎಂಬ ಪುಸ್ತಕದ ಪ್ರತಿಯನ್ನು ಕೇಳಿಪಡೆಯಬಹುದು.

ಜಗತ್ತಿನ ಅಂತ್ಯಕ್ಕಾಗಿ ದೇವರ ಕಾಲಯೋಜನೆಯನ್ನು ನಾವು ಬಹಳ ನಿಖರವಾಗಿ ಪವಿತ್ರ ಬೈಬಲ್ ನಿಂದ ತಿಳಿದುಕೊಂಡಿದ್ದೇವೆ ಎಂದು ದೇವರು ನಮಗೆ ಸಾಬೀತು ಪಡಿಸುತ್ತಿದ್ದಾರೆ.

## ದೇವರ ಉದಾತ್ತ ಕರುಣೆ ಹಾಗೂ ಕನಿಕರ

ದೇವರು ತನ್ನ ಪವಿತ್ರ ಬೈಬಲ್ ನಲ್ಲಿ ಕನಿಕರದಿಂದ ತಾನು ತೋರಿಸಿರುವ ಕರುಣೆಯ ಒಂದು ಸುಂದರವಾದ ಉದಾಹರಣೆಯನ್ನು ಕೊಟ್ಟಿದ್ದಾರೆ. ಪವಿತ್ರ ಬೈಬಲ್ ನಲ್ಲಿ ಯೋನ ಎಂಬ ಪುಸ್ತಕ ಸೇರಿದೆ. ಅದರಲ್ಲಿ, ಸುಮಾರು 2,800 ವರ್ಷಗಳ ಹಿಂದೆ ಅಸ್ತಿತ್ವದಲ್ಲಿದ್ದ 120,000ಕ್ಕೂ ಹೆಚ್ಚು ಜನಸಂಖ್ಯೆ ಹೊಂದಿದ್ದ ಒಂದು ಬಹಳ ದುಷ್ಟವಾದ ಪಟ್ಟಣದ ಬಗ್ಗೆ ದೇವರು ನಮಗೆ ಹೇಳುತ್ತಾರೆ. ಅದರ ಹೆಸರು ನಿನೆವೆ, ಬೈಬಲ್ ನ ಬಗ್ಗೆ ಏನೂ ಅರಿಯದ ಅಶೂರ್ಯ ದೇಶದ ರಾಜಧಾನಿ ಅದಾಗಿತ್ತು. ಆದರೆ ಅದರ ದುಷ್ಟತನದಿಂದ ಹಾಗೂ ಪವಿತ್ರ ದೇವರು ಕರುಣಾಮಯಿಯಾಗಿರುವುದರಿಂದ, ಆತ ಆ ಪಟ್ಟಣಕ್ಕೆ ಯೋನ ಎಂಬ ಪ್ರವಾದಿಯನ್ನು ಕಳುಹಿಸಿದರು. 40 ದಿನಗಳಲ್ಲಿ ಸಂಪೂರ್ಣ ಪಟ್ಟಣ ನಾಶವಾಗಲಿದೆ ಎಂಬುದು ದೇವರಿಂದ ಅವರಿಗೆ ಬಂದ ಯೋನನ ಸಂದೇಶವಾಗಿತ್ತು.

ಈ ಎಚ್ಚರಿಕೆ ಪವಿತ್ರ ದೇವರಿಂದ ಬಂದಿರುವುದು ಎಂದು ಸಂಪೂರ್ಣ ಪಟ್ಟಣ ಹೃತ್ಪೂರ್ವಕವಾಗಿ ಸರಿಯಾಗಿ ನಂಬಿದರು. ಹೀಗೆ, ರಾಜನಿಂದ ಹಿಡಿದು ಅತಿ ಕೀಳು ಸೇವಕನ ವರೆಗೆ ಎಲ್ಲರೂ ಪಶ್ಚಾತ್ತಾಪಪಟ್ಟರು, ಅಂದರೆ ಅವರು ತಮ್ಮ ಪಾಪಗಳಿಂದ ಹಾಗೂ ಅಹಂಕಾರಗಳಿಂದ ವಿಮುಖರಾದರು. ಅವರು ಗೋಣಿತಟ್ಟು ಹಾಗೂ ಬೂದಿಯಲ್ಲಿ ಕುಳಿತರು ಎಂದು ಪವಿತ್ರ ಬೈಬಲ್ ನಮಗೆ ಹೇಳುತ್ತದೆ. ಇದರ ಅರ್ಥವೇನೆಂದರೆ ಅವರು ತಮ್ಮ ಪಾಪಗಳಿಂದ ದೇವರಿಗೆ ಭಯಂಕರವಾದ ಅವಮಾನ ಮಾಡಿದ್ದಾರೆಂದು ಸಂಪೂರ್ಣವಾಗಿ ಅರಿತುಕೊಂಡರು. ಗೋಣಿತಟ್ಟನ್ನು ಹೊದ್ದುಕೊಂಡು ಬೂದಿ ಮೆತ್ತಿಕೊಳ್ಳುವುದು, ಪವಿತ್ರ ದೇವರ ವಿರುದ್ಧ ತಮ್ಮ ಪಾಪಗಳು ಕಾರಣ ತಮ್ಮ ಅಹಂಕಾರ ಮುರಿದಿದೆ ಎಂದು ದೇವರಿಗೆ ಹಾಗೂ ಎಲ್ಲ ಜನರಿಗೆ ಅತ್ಯಂತ ಸ್ಪಷ್ಟವಾಗಿ ತೋರಿಸುವ ಅತ್ಯಂತ ದೈನ್ಯ ಕೃತ್ಯ. ತಮ್ಮ ಪಾಪದ ಕಾರಣ ದೇವರು ತಮ್ಮನ್ನು ನಾಶಮಾಡಲು ತಾವು ನಿಜವಾಗಿಯೂ ಯೋಗ್ಯರು ಎಂದು ಅವರಿಗೆ ತಿಳಿದಿತ್ತು ಎಂದು ಅದು ತೋರಿಸಿತ್ತು.

ಆದರೆ ಪ್ರಾಯಶಃ, ಪವಿತ್ರ ದೇವರು ತನ್ನ ಮನಸ್ಸನ್ನು ಬದಲಾಯಿಸಬಹುದು ಹಾಗೂ ಬದಲಿಗೆ ಅವರಿಗೆ ಕರುಣೆ ತೋರಿಸಬಹುದೆಂಬ ನಿರೀಕ್ಷೆ ಇತ್ತು. ಯೋನ ಅಧ್ಯಾಯ 3 ಶ್ಲೋಕ 6 ರಿಂದ 9ರಲ್ಲಿ ಬೈಬಲ್ ನಮಗೆ ಹೀಗೆಂದು ಹೇಳುತ್ತದೆ:

**ಯೋನನ ಪ್ರಕಟನೆಯು ನಿನೆವೆಯ ಅರಸನಿಗೆ ಮುಟ್ಟಲು ಅವನು ಸಿಂಹಾಸನದಿಂದ ಎದ್ದು ತನ್ನ ನಿಲುವಂಗಿಯನ್ನು ತೆಗೆದುಬಿಟ್ಟು ಗೋಣಿತಟ್ಟನ್ನು ಸುತ್ತಿಕೊಂಡು ಬೂದಿಯಲ್ಲಿ ಕೂತನು. ಇದಲ್ಲದೆ ಅವನು ತನ್ನ ಮತ್ತು ರಾಜ್ಯಾಧಿಕಾರಿಗಳ ಆಜ್ಞೆಯನ್ನಾಗಿ - ಜನ ಪಶು ಮಂದೆ ಹಿಂಡು ಇವುಗಳು ಏನೂ ರುಚಿ ನೋಡದಿರಲಿ; ತಿನ್ನದಿರಲಿ, ಕುಡಿಯದಿರಲಿ; ಜನರಿಗೂ ಪಶುಗಳಿಗೂ ಗೋಣಿತಟ್ಟು ಹೊದಿಕೆಯಾಗಲಿ; ಎಲ್ಲರು ದೇವರಿಗೆ ಬಲವಾಗಿ ಮೊರೆಯಿಡಲಿ; ಒಬ್ಬೊಬ್ಬನು ತನ್ನ ತನ್ನ ದುರ್ಮಾರ್ಗವನ್ನೂ ತಾನು ನಡಿಸುತ್ತಿದ್ದ ಹಿಂಸೆಯನ್ನೂ ತೊರೆದುಬಿಡಲಿ. ದೇವರು ಒಂದು ವೇಳೆ ಮನಮರುಗಿ ಹಿಂದಿರುಗಿ ತನ್ನ ಉಗ್ರಕೋಪವನ್ನು ತೊಲಗಿಸಾನು, ನಾವು ನಾಶವಾಗದೆ ಉಳಿದೇವು ಎಂಬದನ್ನು ನಿನೆವೆಯಲ್ಲೆಲ್ಲಾ ಸಾರಿಸಿದನು.**

ಅವರ ಸಂಪೂರ್ಣ ದೈನ್ಯಕ್ಕೆ ಉತ್ತರವಾಗಿ ನಾವು ಈ ವಿಪರೀತ ದುಷ್ಟ ಜನರಿಗೆ ದೇವರ ಅದ್ಭುತ, ಅಗ್ರಾಹ್ಯ ಕರುಣೆಯ ಬಗ್ಗೆ ಓದುತ್ತೇವೆ. ಯೋನ ಅಧ್ಯಾಯ 3 ಶ್ಲೋಕ 10ರಲ್ಲಿ ದೇವರು ನಮಗೆ ಹೀಗೆಂದು ಹೇಳುತ್ತಾರೆ:

**ದೇವರು ನಿನೆವೆಯವರ ಕಾರ್ಯಗಳನ್ನು ನೋಡಿ ಅವರು ತಮ್ಮ ದುರ್ಮಾರ್ಗದಿಂದ ತಿರುಗಿಕೊಂಡರೆಂದು ತಿಳಿದು ಮನಮರುಗಿ ತಾನು ಅವರಿಗೆ ಮಾಡುವೆನೆಂದು ಪ್ರಕಟಿಸಿದ್ದ ಕೇಡನ್ನು ಮಾಡದೆ ಬಿಟ್ಟನು.**

ನಿನೆವೆಯ ಈ ಸಂಪೂರ್ಣ ಪಟ್ಟಣ ತಮ್ಮ ದುರ್ಮಾರ್ಗಗಳಿಂದ ವಿಮುಖರಾಗಿ ಬಹಳ ದೈನ್ಯದಿಂದ ಕರುಣೆಗಾಗಿ ದೇವರಲ್ಲಿ ಮೊರೆಯಿಟ್ಟ ಕಾರಣ ಪವಿತ್ರ ದೇವರು ನಿಜವಾಗಿಯು ತನ್ನ ಮನಸ್ಸನ್ನು ಬದಲಾಯಿಸಿ ಅವರನ್ನು ನಾಶ ಮಾಡದೆ ಬಿಟ್ಟರು.

ದುಃಖದ ಸಂಗತಿ ಎಂದರೆ, ಇಂದಿನ ಜಗತ್ತಿನ ಕೇವಲ ಒಂದು ಚಿಕ್ಕ ಭಾಗ ಮಾತ್ರ ತಮ್ಮ ದುರ್ಮಾರ್ಗಗಳಿಂದ ವಿಮುಖರಾಗಿ ಬಹಳ ದೈನ್ಯದಿಂದ ಹಾಗೂ ಭಯದಿಂದ ಕರುಣೆಗಾಗಿ ದೇವರಲ್ಲಿ ಮೊರೆಯಿಡುತ್ತಾರೆ ಎಂದು ಪವಿತ್ರ ಬೈಬಲ್ ನಮಗೆ ಹೇಳುತ್ತದೆ. ಆದರೂ ಆತನ ಕರುಣೆಗಾಗಿ ದೇವರಲ್ಲಿ ಬೇಡುವ ಅನೇಕ ಜನರು ನಾಶವಾಗುವುದಿಲ್ಲ ಎಂದು ಬೈಬಲ್ ನಮಗೆ ಆಶ್ವಾಸನೆ ನೀಡುತ್ತದೆ. ಪವಿತ್ರ ದೇವರು ಸುಮಾರು 200 ದಶಲಕ್ಷ ಜನರನ್ನು, *ಅಂದರೆ ಇಂದಿನ ಜನಸಂಖ್ಯೆಯ ಸುಮಾರು 3% ಜನರನ್ನು*, ರಕ್ಷಿಸಲು ಯೋಜಿಸಿದ್ದಾರೆ ಎಂದು ನಾವು ಬೈಬಲ್ ನಿಂದ ಕಲಿಯುತ್ತೇವೆ. ನ್ಯಾಯವಿಚಾರಣೆಯ ದಿನದ ಮೊದಲನೆಯ ದಿನದಂದು, *ಅಂದರೆ 2011ರ ಮೇ 21ರಂದು,* ಅವರನ್ನು ಸ್ವರ್ಗಕ್ಕೆ ಮೇಲಕ್ಕೆತ್ತಲಾಗುತ್ತದೆ ಏಕೆಂದರೆ ದೇವರು ಅವರಿಗೆ ಬಹಳ ಕರುಣೆ ತೋರಿಸಿದ್ದಾರೆ. ಈ ಕಾರಣಕ್ಕಾಗಿಯೆ ದೇವರು ನಮಗೆ ನ್ಯಾಯವಿಚಾರಣೆಯ ದಿನದ ಮುನ್ಸೂಚನೆ ನೀಡಿದ್ದಾರೆ ಎಂದು ನಾವು ಕೃತಜ್ಞರಾಗಿರಬೇಕು. ದೇವರು ಇಷ್ಟು ಕರುಣಾಮಯಿಯಾಗಿರುವುದರಿಂದ ಪ್ರಾಯಶಃ ಆತ ನಿಮ್ಮ ಮೇಲೆಯು ಕರುಣೆ ತೋರಿಸಬಹುದು. ಕೀರ್ತನೆಗಳು ಅಧ್ಯಾಯ 51 ಶ್ಲೋಕ 17ರಲ್ಲಿ ಪವಿತ್ರ ಬೈಬಲ್ ಹೀಗೆಂದು ಹೇಳುತ್ತದೆ:

**ಕುಗ್ಗಿದ ಮನಸ್ಸೇ ದೇವರಿಗೆ ಇಷ್ಟಯಜ್ಞ; ದೇವರೇ ಪಶ್ಚಾತ್ತಾಪದಿಂದ ಜಜ್ಜಿಹೋದ ಮನಸ್ಸನ್ನು ನೀನು ತಿರಸ್ಕರಿಸುವದಿಲ್ಲ.**

ಹಾಗೂ ನಾವು ಆತನ ಕರುಣೆಗಾಗಿ ಪ್ರಾರ್ಥಿಸುವಾಗ ನಮ್ಮ ಮನೋಭಾವ ಹೇಗಿರಬೇಕೆಂದು ಪವಿತ್ರ ದೇವರು ಕೀರ್ತನೆಗಳು ಅಧ್ಯಾಯ 51 ಶ್ಲೋಕ 1 ರಿಂದ 3ರಲ್ಲಿ ನಮಗೆ ತೋರಿಸುತ್ತಾರೆ:

**ಪ್ರೀತಿಸ್ವರೂಪನಾದ ದೇವರೇ, ನನ್ನನ್ನು ಕರುಣಿಸು; ಕರುಣಾನಿಧಿಯೇ, ನನ್ನ ದ್ರೋಹವನ್ನೆಲ್ಲಾ ಅಳಿಸಿಬಿಡು. ನನ್ನ ಪಾಪವನ್ನು ಸಂಪೂರ್ಣವಾಗಿ ತೊಳೆದುಬಿಡು; ನನ್ನ ದೋಷವನ್ನು ಪರಿಹರಿಸಿ ನನ್ನನ್ನು ಶುದ್ಧಿಗೊಳಿಸು. ನಾನು ದ್ರೋಹಿ ಎಂದು ನಾನೇ ಒಪ್ಪಿಕೊಂಡಿದ್ದೇನೆ; ನನ್ನ ಪಾಪವು ಯಾವಾಗಲೂ ನನ್ನ ಮುಂದೆ ಇದೆ.**

ದುಃಖದ ಸಂಗತಿ ಎಂದರೆ, ನೀವು ಸಹಾಯಕ್ಕಾಗಿ ನಿಮ್ಮ ಧರ್ಮದತ್ತ ತಿರುಗಿಕೊಳ್ಳಲು ಸಾಧ್ಯವಿಲ್ಲ ಅಥವಾ ನಿಮ್ಮ ಪಾದ್ರಿಯ ಬಳಿ ಅಥವಾ ಉಪದೇಶಕರ ಬಳಿ ಅಥವಾ ಆಧ್ಯಾತ್ಮಿಕ ನಾಯಕರ ಬಳಿ ಹೋಗಲು ಸಾಧ್ಯವಿಲ್ಲ. ಅವರು ಕೂಡ ತಾವೇ ಕರುಣೆಗಾಗಿ ದೇವರಲ್ಲಿ ಮೊರೆಯಿಡಬೇಕು. ಇದು ಕೇವಲ ನಿಮ್ಮ ಹಾಗೂ ಪವಿತ್ರ ದೇವರ ನಡುವಿನ ವಿಚಾರ. ನಿಮ್ಮ ಪ್ರತಿಯೊಂದು ಆಲೋಚನೆ, ಮಾತುಗಳು, ಹಾಗೂ ಕೃತ್ಯಗಳನ್ನು ದೇವರು ಬಲ್ಲರು. ನಿಮ್ಮ ಪಾಪಗಳಿಂದ ವಿಮುಖರಾಗಿ ಕ್ಷಮೆಗಾಗಿ ದೇವರನ್ನು ದೀನರಾಗಿ ಬೇಡಿಕೊಳ್ಳಿ, ಯಾಚಿಸಿ, ಹಾಗೂ ಶ್ರದ್ಧೆಯಿಂದ ಕೇಳಿಕೊಳ್ಳಿ.

ಹಾಗೂ ದೇವರು ತನ್ನ ಮಹಾ ಕರುಣೆಯಿಂದ ಬಹುತೇಕ ಇಲ್ಲಿರುವ ನಾಶನದ ಬಗ್ಗೆ ನಿಮಗೆ ಎಚ್ಚರಿಕೆ ನೀಡಿರುವುದಕ್ಕಾಗಿ, ಹಾಗೂ ಅತ್ಯುನ್ನತ ಸಂತೋಷ ಹಾಗೂ ಆನಂದ ಹಾಗೂ ಮಹಿಮೆಯಲ್ಲಿ ನಿರಂತರವಾಗಿ ದೇವರೊಂದಿಗೆ ಬದುಕಲು ದೇವರು ಸ್ವರ್ಗಕ್ಕೆ ಕರೆತರುವವರಲ್ಲಿ ನೀವು ಕೂಡ ಒಬ್ಬರಾಗಿರಬಹುದು ಎಂಬ ಮಹಾ ನಿರೀಕ್ಷೆಯನ್ನು ಕೊಟ್ಟಿರುವುದಕ್ಕಾಗಿ ದೇವರಿಗೆ ಕೃತಜ್ಞರಾಗಿ. ಪವಿತ್ರ ಬೈಬಲ್ ನಲ್ಲಿ ಲೂಕ ಅಧ್ಯಾಯ 18 ಶ್ಲೋಕ 10 ರಿಂದ 14ರಲ್ಲಿ ಪವಿತ್ರ ದೇವರು ನಮಗೆ ಹೀಗೆ ಬೋಧಿಸುತ್ತಾರೆ:

**ಪ್ರಾರ್ಥನೆಮಾಡಬೇಕೆಂದು ಇಬ್ಬರು ಮನುಷ್ಯರು ದೇವಾಲಯಕ್ಕೆ ಹೋದರು; ಒಬ್ಬನು ಫರಿಸಾಯನು, ಒಬ್ಬನು ಸುಂಕದವನು. ಫರಿಸಾಯನು ನಿಂತುಕೊಂಡು ಪ್ರಾರ್ಥಿಸುವಾಗ ತನ್ನೊಳಗೆ - ದೇವರೇ, ಸುಲುಕೊಳ್ಳುವವರೂ ಅನ್ಯಾಯಗಾರರೂ ಹಾದರಮಾಡುವವರೂ ಆಗಿರುವ ಉಳಿದ ಜನರಂತೆ ನಾನಲ್ಲ, ಈ ಸುಂಕದವನಂತೆಯೂ ಅಲ್ಲ; ಆದದರಿಂದ ನಿನಗೆ ಸ್ತೋತ್ರಮಾಡುತ್ತೇನೆ. ವಾರಕ್ಕೆ ಎರಡಾವರ್ತಿ ಉಪವಾಸ ಮಾಡುತ್ತೇನೆ; ನಾನು ಸಂಪಾದಿಸುವ ಎಲ್ಲಾದರಲ್ಲಿಯೂ ಹತ್ತರಲ್ಲೊಂದು ಪಾಲು ಕೊಡುತ್ತೇನೆ ಅಂದುಕೊಂಡನು. ಆದರೆ ಆ ಸುಂಕದವನು ದೂರದಲ್ಲಿ ನಿಂತು ಆಕಾಶದ ಕಡೆಗೆ ಕಣ್ಣೆತ್ತಿ ನೋಡುವದಕ್ಕೂ ಮನಸ್ಸಿಲ್ಲದೆ ಎದೆಯನ್ನು ಬಡುಕೊಳ್ಳುತ್ತಾ - ದೇವರೇ, ಪಾಪಿಯಾದ ನನ್ನನ್ನು ಕರುಣಿಸು ಅಂದನು. ಇವನು ನೀತಿವಂತನೆಂದು ನಿರ್ಣಯಿಸಲ್ಪಟ್ಟವನಾಗಿ ತನ್ನ ಮನೆಗೆ ಹೋದನು, ಆ ಫರಿಸಾಯನು ಅಂಥವನಾಗಿ ಹೋಗಲಿಲ್ಲ ಎಂದು ನಿಮಗೆ ಹೇಳುತ್ತೇನೆ. ತನ್ನನ್ನು ಹೆಚ್ಚಿಸಿಕೊಳ್ಳುವ ಪ್ರತಿಯೊಬ್ಬನು ತಗ್ಗಿಸಲ್ಪಡುವನು; ತನ್ನನ್ನು ತಗ್ಗಿಸಿಕೊಳ್ಳುವವನು ಹೆಚ್ಚಿಸಲ್ಪಡುವನು ಅಂದನು.**

***ದೇವರು ಈ ಸುಂಕದವನ ಮೇಲೆ ಕರುಣೆ ತೋರಿಸಿದ ಹಾಗೆಯೆ ನಿಮ್ಮ ಮೇಲೆಯೂ ಕರುಣೆ ತೋರಿಸಲಿ.***

ಜಗತ್ತಿನ ಅಂತ್ಯದ ವಿಚಾರವಾಗಿ ನೀವು ಹೆಚ್ಚಿನ ವಿಷಯಗಳನ್ನು ತಿಳಿದುಕೊಳ್ಳಲು ಉಚಿತ ಪುಸ್ತಕಗಳಿಗಾಗಿ ಫ್ಯಾಮಿಲೀ ರೇಡಿಯೋ,ಓಕ್ ಲ್ಯಾಂಡ್, ಕ್ಯಾಲಿಫೋರ್ನಿಯಾ 94621, ಯುಎಸ್ ಎ ಇಲ್ಲಿಗೆ ಬರೆಯಲು ಅಥವಾ ಅದನ್ನು ಅವಲೋಕಿಸಲು ನಮ್ಮ ವೆಬ್ ಸೈಟ್ www.familyradio.com: ಅನ್ನು ನೋಡಲು ನಿಮ್ಮನ್ನು ಆಮಂತ್ರಿಸುತ್ತಿದ್ದೇವೆ.

**ಐ ಹೋಪ್ ಗಾಡ್ ವಿಲ್ ಸೇವ್ ಮಿ**
**ವಿ ಆರ್ ಆಲ್ ಮೋಸ್ಟ್ ದೇರ್!**
**ಟು ಗಾಡ್ ಬಿ ದಿ ಗ್ಲೋರಿ!**

ನೀವು ಓದಿರುವ ಈ ವಿಷಯದಲ್ಲಿ ನಿಮಗೆ ಏನಾದರೂ ಪ್ರಶ್ನೆಗಳಿದ್ದರೆ ಅಥವಾ ನಿಮಗೆ ಜಗತ್ತಿನಾದ್ಯಂತ ಪ್ರಸರಣಗೊಳ್ಳುವ ಉಚಿತ ತರಾಂಗಾಂತರದ ಶೆಡ್ಯೂಲ್ ನಿಮಗೆ ಬೇಕಿದ್ದಲ್ಲಿ, ದಯವಿಟ್ಟು ಇಲ್ಲಿಗೆ ಬರೆಯಿರಿ:

**ಫ್ಯಾಮಿಲೀ ರೇಡಿಯೋ**
**ಓಕ್ ಲ್ಯಾಂಡ್, ಕ್ಯಾಲಿಫೋರ್ನಿಯಾ 94621**
**ಯುಎಸ್ ಎ**
ಅಂತರ್ ಜಾಲದಲ್ಲಿ: **http://www.familyradio.com**
ಇ-ಮೇಲ್: **International@familyradio.com**

ಫ್ಯಾಮಿಲೀ ರೇಡಿಯೋವು ಜಗತ್ತಿನಾದ್ಯಂತ 50 ಭಾಷೆಗಳಲ್ಲಿ ಪ್ರಸಾರ ಮಾಡುತ್ತಿದೆ.

ಫ್ಯಾಮಿಲೀ ರೇಡಿಯೋವು ಒಂದು ಬೈಬಲ್ ಆಧಾರಿತ ಕ್ರಿಶ್ಚಿಯನ್ ರೇಡಿಯೋ ಧರ್ಮಪ್ರಚಾರಕ ಸಂಸ್ಥೆಯಾಗಿದ್ದು ಇದು ಯಾವುದೇ ಚರ್ಚ್ ಗೆ ಒಳಪಟ್ಟಿಲ್ಲ.

*KANADA JD 07-27-10*